ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

16

ಇಲಾಖೆ / ವಿಷಯ : DEPARTMENT / SUBJECT: ಗೃಹ - CD ಪ್ರಕರಣ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ ದಿನಾಂಕ : DATE 26/3/21

# ಖಾಕಿ ವಿರುದ್ಧವೇ ಸಿಡಿದ ಲೇಡಿ

## 1.15 ನಿಮಿಷದ 2ನೇ ವಿಡಿಯೋ ಬಿಡುಗಡೆ ಮಾಡಿದ ಯುವತಿ

26-3-21

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ರಾಷ್ಟ ಮಟ್ಟದಲ್ಲಿ ಚರ್ಚೆಗೆ ಗ್ರಾಸವಾಗಿದ್ದ ಮಾಜಿ ಸಚಿವರ ಅಶ್ಲೀಲ ವಿಡಿಯೋ ಪ್ರಕರಣದ ಯುವತಿ 2ನೇ ಬಾರಿ ಪ್ರತ್ಯಕ್ಷವಾಗಿದ್ದಾಳೆ. 1 ನಿಮಿಷ 15 ಸೆಕೆಂಡ್‌ನ ವಿಡಿಯೋ ಬಿಡುಗಡೆ ಮಾಡಿರುವ ಯುವತಿ, ಈ ಬಾರಿ ನೇರವಾಗಿ ಎಸ್‌ಐಟಿ ಅಧಿಕಾರಿಗಳ ವಿರುದ್ಧವೇ ಗಂಭೀರ ಆರೋಪ ಮಾಡಿರುವುದು ಹಲವು ಅನುಮಾನಗಳನ್ನು ಮೂಡಿಸಿದೆ.

ನಾನು ಮಾ.12ಕ್ಕೆ ಮೊದಲ ವಿಡಿಯೋ ಮಾಡಿ ಕಮಿಷನರ್ ಕಚೇರಿ ಹಾಗೂ ಎಸ್‌ಐಟಿ ಅಧಿಕಾರಿಗಳಿಗೆ ತಲುಪಿಸಿದ್ದೆ. ಆದರೆ, ಮಾ.13ರಂದು ರಮೇಶ್ ಜಾರಕಿಹೊಳಿ ತರಾತುರಿಯಲ್ಲಿ ದೂರು ಕೊಟ್ಟ ಅರ್ಧಗಂಟೆ ನಂತರ ನನ್ನ ವಿಡಿಯೋ ಬಿಡುಗಡೆ ಮಾಡಲಾಗಿದೆ. ಎಸ್‌ಐಟಿಯವರು ಯಾರ ಪರವಾಗಿದ್ದಾರೆ ಎಂದು ನನಗೆ ಅರ್ಥವಾಗುತ್ತಿಲ್ಲ. ಯಾರನ್ನು ರಕ್ಷಣೆ ಮಾಡುತ್ತಿದ್ದಾರೆ ಎಂಬುದೂ ಗೊತ್ತಾಗುತ್ತಿಲ್ಲ ಎಂದು ಹೇಳಿದ್ದಾಳೆ. ಆದರೆ, ಎಸ್‌ಐಟಿ ರಚನೆಯಾಗಿದ್ದೆ ಮಾ.13ರ ಸಂಜೆ. ಮಾ.12ಕ್ಕೇ ವಿಡಿಯೋ ಕಳುಹಿಸಿದ್ದೆ ಎನ್ನುವ ಯುವತಿಯ ಮಾತು ಶಂಕಾಸ್ಪದವಾಗಿದೆ.

ಅಲ್ಲದೆ, ರಮೇಶ್ ಜಾರಕಿಹೊಳಿ ದೂರು ದಾಖಲಿಸುವ ಹಿಂದಿನ ದಿನವೇ ಕಬ್ಬನ್‌ಪಾರ್ಕ್ ಪೊಲೀಸರು ದಿನೇಶ್ ಕಲ್ಲಹಳ್ಳಿ ಕೊಟ್ಟಿದ್ದ ದೂರಿನ ಮೇಲೆ ಯುವತಿಗೆ ವಿಚಾರಣೆಗೆ ಬರುವಂತೆ ನೋಟಿಸ್ ಕೊಟ್ಟಿದ್ದರು. ಇನ್ನು ಕಮಿಷನರ್ ಕಚೇರಿಗೆ ವಿಡಿಯೋ ತಲುಪಿಸಿದ್ದೆ ಎಂದು ಯುವತಿ ಹೇಳಿದ್ದಾಳೆ. ಆದರೆ, ಅಪರಿಚಿತರಿಂದ ಬಂದ ವಿಡಿಯೋವನ್ನು ಕಮಿಷನರ್ ನೋಡಿ ಏಕಾಏಕಿ ಮಾಧ್ಯಮಗಳಿಗೆ ಬಿಡುಗಡೆ ಮಾಡಲು ಸಾಧ್ಯವಿಲ್ಲ. ಹೀಗಾಗಿ 1 ದಿನ ತಡವಾಗಿ ಬಿಡುಗಡೆ ಮಾಡಿರಬಹುದು ಎಂದು ಪೊಲೀಸ್ ಅಧಿಕಾರಿಗಳು ಹೇಳಿದ್ದಾರೆ.

**ಪಾಲಕರ ದೂರು ಸ್ವ ಇಚ್ಛೆಯಲ್ಲ:** ನನ್ನ ಅಪ್ಪ-ಅಮ್ಮ, ಮಗಳು ಕಿಡ್ನ್ಯಾಪ್ ಆಗಿದ್ದಾಳೆ ಎಂದು ದೂರು ಕೊಟ್ಟಿದ್ದಾರೆ. ಆದರೆ ನನ್ನ ಅಪ್ಪ-ಅಮ್ಮ ಸ್ವಇಚ್ಛೆಯಿಂದ ದೂರು ಕೊಟ್ಟಿದ್ದಾರೆ ಎಂದು ನನಗೆ ಅನ್ನಿಸುತ್ತಿಲ್ಲ. ಯಾಕೆಂದರೆ ಅಪ್ಪ ಅಮ್ಮನಿಗೆ ನಾನೇನು ಎಂಬುದು ಗೊತ್ತು. ಬಲವಂತವಾಗಿ ಅವರಿಂದ ದೂರು ಕೊಡಿಸಲಾಗಿದೆ. ಅಪ್ಪ-ಅಮ್ಮನ ಸುರಕ್ಷತೆ ಮುಖ್ಯ. ಅವರು ಸುರಕ್ಷಿತವಾಗಿದ್ದಾರೆ ಎಂಬುದು ಗೊತ್ತಾದ ಬಳಿಕ ನಾನೇ ಎಸ್‌ಐಟಿ ಮುಂದೆ ಬರುತ್ತೇನೆ ಎಂದು ಯುವತಿ ಹೇಳಿದ್ದಾಳೆ. ಅಲ್ಲದೆ ಕಾಂಗ್ರೆಸ್ ನಾಯಕರಾದ ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್, ರಮೇಶ್‌ಕುಮಾರ್ ಹಾಗೂ ಇನ್ನಿತರ ಮಹಿಳಾ ಸಂಘಟನೆಗಳಿಗೆ ಅಪ್ಪ-ಅಮ್ಮನಿಗೆ ರಕ್ಷಣೆ ನೀಡಿ' ಎಂದೂ ಕೇಳಿಕೊಂಡಿದ್ದಾಳೆ.




### ಎಸ್‌ಐಟಿಯಿಂದ 3 ಸಭೆ

ಸಿಡಿ ಲೇಡಿ 2ನೇ ವಿಡಿಯೋ ಬಿಡುಗಡೆ ಮಾಡಿದ ಬೆನ್ನಲ್ಲೇ ಬೆಂ. ನಗರ ಪೊಲೀಸ್ ಆಯುಕ್ತ ಕಮಲ್ ಪಂತ್ ನೇತೃತ್ವದಲ್ಲಿ ಎಸ್‌ಐಟಿ ಅಧಿಕಾರಿಗಳು ಬುಧವಾರ 3 ಬಾರಿ ಸಭೆ ನಡೆಸಿದ್ದಾರೆ. ಯುವತಿ ಎಲ್ಲಿಂದ ವಿಡಿಯೋ ಮಾಡಿ ಕಳುಹಿಸಿದ್ದಾಳೆ? ಆಶ್ರಯ ನೀಡಿದವರು ಯಾರು ಎಂಬ ಬಗ್ಗೆ ಚರ್ಚಿಸಿದ್ದಾರೆ.

### ಮತ್ತೊಂದು ನೋಟಿಸ್

ವಿಜಯಪುರ: ಸಿಸಿಬಿ ಪೊಲೀಸರು ನಿಡಗುಂದಿಗೆ ಭೇಟಿ ನೀಡಿ, ವೀರೇಶ ನಗರದಲ್ಲಿರುವ ಮನೆಯೊಂದಕ್ಕೆ ಬುಧವಾರ ರಾತ್ರಿಯೇ ನೋಟಿಸ್ ಅಂಟಿಸಿದ್ದಾರೆ. ಈ ಮನೆ ಸಿಡಿ ಪ್ರಕರಣದಲ್ಲಿ ಭಾಗಿಯಾದ ಯುವತಿಯ ಅಜ್ಜಿಯದೆಂದು ಹೇಳಲಾಗಿದೆ.

### ಮಕ್ಕಳ ಹಿನ್ನೆಲೆ ಧ್ವನಿ

ಈ ಹಿಂದೆ ಬಿಡುಗಡೆ ಮಾಡಲಾಗಿದ್ದ ವಿಡಿಯೋದಲ್ಲಿ ಯುವತಿಯ ಮುಖ ಚಹರೆ ಸಂಪೂರ್ಣ ಕಾಣುತ್ತಿತ್ತು. 2ನೇ ವಿಡಿಯೋದಲ್ಲಿ ಯುವತಿ ಮುಖ ಬ್ಲರ್ ಮಾಡಲಾಗಿದೆ. ಯುವತಿ ಮಾತನಾಡುವ ಆರಂಭದಲ್ಲಿ ಮಕ್ಕಳು ಅಳುವ ಹಾಗೂ ಆಟವಾಡುತ್ತಿರುವ ಧ್ವನಿ ಕೇಳಿಬಂದಿದೆ. ಹೀಗಾಗಿ ಯುವತಿ ಸಂಬಂಧಿ ಅಥವಾ ಸ್ನೇಹಿತರ ಮನೆಯಲ್ಲಿ ಅಡಗಿಕೊಂಡಿದ್ದಾರೆಯೇ? ಎಂಬ ಅನುಮಾನ ವ್ಯಕ್ತವಾಗಿದೆ. ಬಿಡುಗಡೆಯಾದ ವಿಡಿಯೋ ಎಡಿಟ್ ಮಾಡಲಾಗಿದ್ದಾಗಿದೆ. ಎರಡೂ ವಿಡಿಯೋಗಳನ್ನು ಎಡಿಟ್ ಮಾಡಿ ಆಯ್ದ ಹೇಳಿಕೆಯನ್ನಷ್ಟೇ ಬಿಡುಗಡೆ ಮಾಡಲಾಗಿದೆ. ಹೀಗಾಗಿ ಶಂಕಿತರ ಪರ ಮಧ್ಯವರ್ತಿಯಾಗಿ ಬೇರೆಯವರು ಕೆಲಸ ಮಾಡುತ್ತಿರುವ ಬಗ್ಗೆ ಪೊಲೀಸರಿಗೆ ಶಂಕೆ ವ್ಯಕ್ತವಾಗಿದೆ.

### ಮೂಲ ಬಿಟ್ಟುಕೊಡದ ಶಂಕಿತರು

**ಯುವತಿ ವಿಡಿಯೋ ಅನ್ನು ಲ್ಯಾಪ್‌ಟಾಪ್‌ಗೆ ಅಪ್‌ಲೋಡ್ ಮಾಡಿ, ನಂತರ ಅಲ್ಲಿಂದ ರೆಕಾರ್ಡ್ ಮಾಡಲಾಗಿದೆ. ನೇರ ಮೊಬೈಲ್‌ನಿಂದ ವಿಡಿಯೋ ಮಾಡಿ ಬಿಡುಗಡೆ ಮಾಡಿದರೆ ಮೂಲ ಗೊತ್ತಾಗುತ್ತದೆ ಎಂದು ಈ ಪ್ರಕ್ರಿಯೆ ನಡೆಸಲಾಗಿದೆ.**

ಸಿಡಿ ಪ್ರಕರಣದಲ್ಲಿ ಭಾಗಿಯಾಗಿದ್ದಾಳೆ ಎನ್ನಲಾದ ಯುವತಿ ಸಭಾಧ್ಯಕ್ಷರ ಮುಂದೆ ಹಾಜರಾಗಿ ರಕ್ಷಣೆಗಾಗಿ ಸರ್ಕಾರಕ್ಕೆ ಮನವಿ ಮಾಡಲಿ. ಅದನ್ನು ಬಿಟ್ಟು ಎಲ್ಲೆಲ್ಲಿಂದಲೋ ವಿಡಿಯೋ ಮಾಡಿ ಮಾಧ್ಯಮಗಳಿಗೆ ಕಳುಹಿಸಿದರೆ ಹೇಗೆ?

| ಎಚ್.ಡಿ. ಕುಮಾರಸ್ವಾಮಿ ಮಾಜಿ ಸಿಎಂ

### ಜಾರಕಿಹೊಳಿ ವಿಚಾರಣೆ

ರಮೇಶ್ ಜಾರಕಿಹೊಳಿ ಅವರ ಸದಾಶಿವ ನಗರದ ನಿವಾಸಕ್ಕೆ ಬುಧವಾರ ಭೇಟಿ ನೀಡಿದ ಎಸ್‌ಐಟಿ ಅಧಿಕಾರಿಗಳ ತಂಡ, ಸಂಜೆ 6.30ರಿಂದ ರಾತ್ರಿ 9.30ರವರೆಗೆ ವಿಚಾರಣೆ ನಡೆಸಿದೆ. ವಿಚಾರಣೆ ವೇಳೆ ಮಾಜಿ ಸಚಿವರ ಮೊಬೈಲ್ ಜಪ್ತಿ ಮಾಡಲಾಗಿತ್ತು. ಆದರೆ, ಪ್ರಕರಣಕ್ಕೆ ಸಂಬಂಧಿಸಿದ ಯಾವುದೇ ಮಾಹಿತಿ ಸಿಕ್ಕಿಲ್ಲ. ಮೊಬೈಲ್ ಫಾರ್ಮಾಟ್ ಮಾಡಿದ ಹಿನ್ನೆಲೆಯಲ್ಲಿ ಪರಿಶೀಲನೆ ವೇಳೆ ಯಾವುದೇ ಡಾಟಾ ಸಿಕ್ಕಿಲ್ಲ ಎನ್ನಲಾಗಿದೆ. ಇದೀಗ ಮೊಬೈಲ್ ಅನ್ನು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿರುವ ಎಸ್‌ಐಟಿ ರಿಟ್ರೀವ್ ಮಾಡಲು ಮುಂದಾಗಿದೆ.